# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>

## <u>ಸ್ಪೆಷಲ್ ಸಿ. ಸಂಖ್ಯೆಃ 84/2023</u>

ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ .....ಫಿರ್ಯಾದುದಾರರು

-- ವಿರುದ್ಧ --

ನರಸಿಂಹಪ್ಪ ....ಆರೋಪಿತ

| | | |
|---|---|---|
| 1. | ಆರೋಪಿಯ ಹೆಸರು | ನರಸಿಂಹಪ್ಪ |
| 2. | ತಂದೆಯ ಹೆಸರು | ಲೇಟ್ ಅಂಜಪ್ಪ |
| 3. | ವಯಸ್ಸು | 40 ವರ್ಷ |
| 4. | ಉದ್ಯೋಗ | ಕೂಲಿ ಕೆಲಸ |
| 5. | ವಾಸಸ್ಥಳ | ಕೇತನಾಯಕನಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ. |

## <u>ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ. 351 ರ (ದಂಡ ಪ್ರಕ್ರಿಯಾ ಸಂಹಿತೆ ಕಲಂ. 313) ಅಡಿಯಲ್ಲಿ ಆರೋಪಿಯ ಹೇಳಿಕೆ</u>

ಪ್ರಶ್ನೆ 1. ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ಮಾಡಿರುವ ಸಾಕ್ಷ್ಯ ವಿಚಾರಣೆಯನ್ನು ನೀವು ಕೇಳಿಸಿಕೊಂಡಿರುವಿರಾ ?

ಉತ್ತರಃ ಕೇಳ್ಪಿದ್ದೇನೆ.

ಪ್ರಶ್ನೆ 2. ಪ್ರಾಸಾ 1 ಎಮ್.ರೇಣುಕಯ್ಯ, ನಿವೃತ್ತ ಪಿ.ಎಸ್.ಐ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 07.04.2023 ರಂದು ಬೆಃ 08.30 ಗಂಟೆ ಸಮಯದಲ್ಲಿ ತಾನು, ತಮ್ಮ ಸಿಬ್ಬಂದಿಗಳಾದ ಚಾಸಾ-3 ಮತ್ತು 4 ರವರುಗಳು ಠಾಣೆಯ ವ್ಯಾಪ್ತಿಯಲ್ಲಿ ಗಸ್ತು ಕಾರ್ಯಕ್ಕೆ ಠಾಣೆಯಿಂದ ಹೊರಟು, ಗಸ್ತು ಕಾರ್ಯ ಮಾಡಿಕೊಂಡು ಸಂಜೆ

ಸಮಾರು 5.30 ರ ಸಮಯದಲ್ಲಿ ಕೇತೆನಹಳ್ಳಿ ಗ್ರಾಮಕ್ಕೆ ಹೋಗಿದ್ದು, ಆ ಸಂದರ್ಭದಲ್ಲಿ ತನಗೆ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಏನೆಂದರೆ, ನಾಯನಹಳ್ಳಿ ಗ್ರಾಮದ ನರಸಿಂಹಪ್ಪ ಬಿನ್ ಆಂಜಿನಪ್ಪ, 40 ವರ್ಷ ಎಂಬಾತನು ಅವರ ಮನೆಯ ಪಕ್ಕದ ಖಾಲಿ ಜಾಗದಲ್ಲಿ ಬೆಳೆದಿರುವ ಕಬ್ಬಿನ ನಡುವೆ ಅಕ್ರಮವಾಗಿ ಮಾದಕ ವಸ್ತುವಾದ ಗಾಂಜಾ ಗಿಡಗಳನ್ನು ಮಾರಟ ಮಾಡುವ ಉದ್ದೇಶದಿಂದ ಬೆಳೆಸಿರುವುದಾಗಿ ಮಾಹಿತಿ ಬಂದಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ [signature]

ಪ್ರಶ್ನೆ 3. ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ತಾನು ಹಾಗೂ ಸಿಬ್ಬಂದಿಯವರು ಸದರಿ ನರಸಿಂಹಪ್ಪ ರವರ ಮನೆಯ ಬಳಿ ಹೋಗಿ ನೋಡಲಾಗಿ, ಮನೆಯ ಪಕ್ಕದ ಪೂರ್ವ ದಿಕ್ಕಿಗೆ ಇರುವ ಖಾಲಿ ಜಾಗದಲ್ಲಿ 4 ಗಾಂಜಾ ಗಿಡಗಳು ಬೆಳೆದಿರುವುದು ಕಂಡು ಬಂದಿರುತ್ತವೆ, ಮನಯೊಳಗೆ ಕೂಗಿ ನೋಡಲಾಗಿ, ಒಬ್ಬ ವ್ಯಕ್ತಿ ಬಂದಿದ್ದು, ಆತನ ತನ್ನ ಹೆಸರನ್ನು ನರಸಿಂಹಪ್ಪ ಬಿನ್ ಆಂಜಿನಪ್ಪ, 40 ವರ್ಷ ಎಂದು ತಿಳಿಸಿದ್ದು, ನಂತರ ಆತನನ್ನು ಗಾಂಜಾಗಿಡಗಳನ್ನು ಬೆಳೆಸಿರುವ ಬಗ್ಗೆ ಪ್ರಶ್ನಿಸಿ, ಅವುಗಳನ್ನು ಬೆಳೆಯಲು ಪರವಾನಿಗೆ ಇದೆಯೇ ಮತ್ತು ಏತಕ್ಕೆ ಬೆಳೆಸಿದ್ದೀಯಾ ಎಂದು ವಿಚಾರಣೆ ಮಾಡಲಾಗಿ, ಯಾವುದೇ ಪರವಾನಿಗೆ ಇರುವುದಿಲ್ಲ ಮತ್ತು ಹಣಕ್ಕಾಗಿ ಬೆಳೆಸಿರುವುದಾಗಿ ನುಡಿದಿರುತ್ತೀರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ [signature]

ಪ್ರಶ್ನೆ 4. ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆಸುವುದು ಅಪರಾಧವೆಂದು ತಿಳಿಸಿ, ಆತನ ವಿರುದ್ಧ ಕಾನೂನು ಕ್ರಮ

ಜರುಗಿಸಲು ಸ್ಥಳದಲ್ಲಿ ಒಂದು ಪಿರ್ಯಾದನ್ನು ತಯಾರಿಸಿ, ಅದನ್ನು ಚಾಸಾ-3 ಹೆಚ್ ಸಿ -249 ಸಂದೀಪ್ ಕಮಾರ್ ರವರ ಮೂಲಕ ಮುಂದಿನ ಕ್ರಮಕ್ಕಾಗಿ ಠಾಣೆಗೆ ಕಳುಸಿಕೊಟ್ಟಿದ್ದು, ಸದರಿ ಪಿರ್ಯಾದನ್ನು ಸ್ವೀಕರಿಸಿ, ಚಾಸಾ-13 ಹೆಚ್ ಸಿ 126 ರವರು ಕ್ರೈ ನಂ 124/2023 ರಲ್ಲಿ ಪ್ರಕರಣವನ್ನು ದಾಖಲಿಸಿ ಪ್ರ.ವ.ವ ವನ್ನು ತಯಾರಿಸಿ, ಮೇಲಾಧಿಕಾರಿಗಳಿಗೆ ಹಾಗೂ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರ:

ಪ್ರಶ್ನೆ 5. ಪ್ರಾಸಾ 6 ನಾರಾಯಣಸ್ವಾಮಿ, ಕಾರ್ಯದರ್ಶಿ ಶಿಟ್ಟಹಳ್ಳಿ ಗ್ರಾಮ ಪಂಚಾಯತಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹಾಗೂ ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸಲು ಚಾಸಾ-5 ವೆಂಕಟೇಶ್ ಮತ್ತು ಪ್ರಾಸಾ 6 ರವರಿಗೆ ದೂರವಾಣಿ ಕರೆ ಮಾಡಿ ಸದರಿ ವಿಚಾರವನ್ನು ತಿಳಿಸಿ ಸ್ಥಳಕ್ಕೆ ಬರ ಮಾಡಿಕೊಂಡು ಪ್ರಕರಣದ ಬಗ್ಗೆ ಮಾಹಿತಿ ನೀಡಿ, ದಾಳಿ ಕಾಲದಲ್ಲಿ ಪಂಚರಾಗಿ ಸಹಕರಿಸಲು ಕೋರಿ ಮನವಿ ಮಾಡಿದ ಮೇರೆಗೆ ಅವರು ಒಪ್ಪಿದ್ದು, ಅವರಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರ:

ಪ್ರಶ್ನೆ 6. ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಾಳಿ ಕಾಲಕ್ಕೆ ಗೆಜೆಟೆಡ್ ಅಧಿಕಾರಿಯಾಗಿ ಹಾಜರಿದ್ದು, ಸಹಕರಿಸುವಂತೆ ತಿಳಿಸಿ, ಚಾಸಾ-2 ASP ಚಿಂತಾಮಣಿ ರವರಿಗೆ ಲಿಖಿತ ಮನವಿ ಸಲ್ಲಿಸಿದ್ದು, ಅದರಂತೆ ಅವರು ಸಹ ರಾತ್ರಿ 9.00 ಗಂಟೆಗೆ ಸುಮಾರಿಗೆ ಸ್ಥಳಕ್ಕೆ ಆಗಮಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರ:

ಪ್ರಶ್ನೆ 7. ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ನಂತರ ರಾತ್ರಿ 9.30 ರ ಸುಮಾರಿಗೆ ಪಂಚರು ಹಾಗೂ ಗೆಜೆಟೆಡ್ ಅಧಿಕಾರಿಗಳ ಸಮಕ್ಷಮ ತನಿಖೆಯನ್ನು ಪ್ರಾರಂಭಿಸಿ, ಚಾಸಾ-2 ರವರು ಸಹ ಆರೋಪಿಯನ್ನು ಉದ್ದೇಶಿಸಿ ಆರೋಪಿಯನ್ನು ಉದ್ದೇಶಿಸಿ ಗಾಂಜಾ ಗಿಡಗಳನ್ನು ಬೆಳೆಯಲು ಅನುಮತಿ ಇದೆಯೇ ಎಂದು ವಿಚಾರಿಸಲಾಗಿ, ಆತ ಯಾವುದೇ ಅನುಮತಿ ಇರುವುದಿಲ್ಲ ಹಾಗೂ ಹೆಚ್ಚಿನ ಹಣ ಗಳಿಸಲು ಬೆಳೆಸಿರುವುದಾಗಿ ತಿಳಿಸಿರುತ್ತೀರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 8. ಪ್ರಾಸಾ 1 ಮತ್ತು 6 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಗಿಡಗಳನ್ನು ಬೆಳೆಸಿರುವ ಜಾಗವನ್ನು ಪರಿಶೀಲಿಸಲಾಗಿ, ಕಬ್ಬು ಗಿಡಗಳನ್ನು ಬೆಳೆದಿರುವ ನಡುವೆ ಗಾಂಜಾ ಗಿಡಗಳನ್ನು ಬೆಳೆದಿದ್ದು, ಅವುಗಳ ಬುಡದ ಸುತ್ತಲೂ ಮಣ್ಣಿನಿಂದ ಪಾತಿ ಮಾಡಿ, ಅದಕ್ಕೆ ಗೊಬ್ಬರ ನೀರು ಹಾಕಿ ಬೆಳೆಸಿರುವುದು ಕಂಡು ಬಂದಿರುತ್ತದೆ, ಸದರಿ ಜಾಗದಲ್ಲಿ ಒಟ್ಟು 4 ಗಿಡಗಳು ಬೆಳೆಸಿದ್ದು, ಅವುಗಳು ಸುಮಾರು 5 ಅಡಿ ಎತ್ತರವಿದ್ದು, ಅವುಗಳಿಗೆ ಹಳೆಯ ಸೀರೆಯಿಂದ ಸುತ್ತಿ, ಯಾರಿಗೂ ಕಾಣದಂತೆ ಮರೆ ಮಾಚಿರುವುದು ಕಂಡು ಬಂದಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 9. ಪ್ರಾಸಾ 1 ಮತ್ತು 6 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಆರೋಪಿಯಿಂದಲೇ ಸದರಿ ಗಿಡಗಳನ್ನು ಬೇರು ಸಮೇತ ಕಿಳಿಸಿ, ಡಿಜಿಟಲ್ ತೂಕದ ಯಂತ್ರದಲ್ಲಿ ತೂಕ ಮಾಡಲಾಗಿ ಅವುಗಳ 920 ಗ್ರಾಂ ತೂಕವಿದ್ದು, ಅದರ ಅಂದಾಜು ಮೌಲ್ಯ 15 ಸಾವಿರ ರೂಗಳು ಎಂದು ನಿರ್ದರಿಸಲಾಯಿತು, ಸದರಿ ಗಾಂಜಾ ಗಿಡಗಳನ್ನು ಒಂದು ಬಿಳಿ ಬಟ್ಟೆಯ ಬ್ಯಾಗದಲ್ಲಿ ತುಂಬಿ, ಅದರ ಬಾಯಿಯನ್ನು ದಾರದಿಂದ ಹೊಲೆದು ಅರಗಿನ

ಸಹಾಯದಿಂದ **ಎಸ್ ಆರ್** ಅಕ್ಷರದಿಂದ ಮೊಹರು ಮಾಡಿ ಪಂಚರ ಸಮಕ್ಷಮ FLMS QR ಕೋಡ್ ನಿಂದ ಸೀಲ್ ಮಾಡಿ, ಸೀಜ್ ಮಾಡಿ, ಪಂಚರು ಹಾಗೂ ತಮ್ಮಗಳ ಸಹಿಗಳುಳ್ಳ ಚೀಟಿಯನ್ನು ಅದಕ್ಕೆ ಅಂಟಿಸಿಲಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 10. ಪ್ರಾಸಾ 1 ಮತ್ತು 6 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಸದರಿ ವಿಚಾರವಾಗಿ ಗಾಂಜಾ ಗಿಡಗಳನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡು, ಸ್ಥಳದಲ್ಲಿ ವಿವರವಾದ ಪಂಚನಾಮೆಯನ್ನು ರಾತ್ರಿ 10.00 ರಿಂದ 11.00 ರ ತನಕ ಜರುಗಿಸಿ, ಪ್ರಿಂಟೌಟ್ ತೆಗೆದು ತಾವುಗಳು, ಆರೋಪಿ, ಪಂಚರು ಮತ್ತು ಗೆಜೆಟೆಡ್ ಅಧಿಕಾರಿ ಸಹಿಗಳನ್ನು ಮಾಡಿರುತ್ತಾರೆ ಹಾಗೂ ಪ್ರಾಸಾ6 ರವರು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 11. ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹಿಂದುರಿಗಿ, ಚಾಸಾ-14, PSI ನಾರಾಯಣಸ್ವಾಮಿ ರವರ ಮುಂದೆ ಪಂಚನಾಮೆ, ಮಾಲು ಹಾಗೂ ಆರೋಪಿಯನ್ನು ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 12. ಪ್ರಾಸಾ 2 ಸುಕಾಂತ, ಪಿ.ಡಿ.ಓ ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ.10.10.2023 ರಂದು ಚಿಂತಾಮಣಿ ಗ್ರಾಮಾಂತರ ಪೊಲೀಸರ ಮೌಖಿಕ ಕೋರಿಕೆಯ ಮೇರೆಗೆ ನರಸಿಂಗಪ್ಪ ಬಿನ್ ಆಂಜಪ್ಪ ರವರು ಕೇತನಾಯಕನಹಳ್ಳಿ ಗ್ರಾಮದಲ್ಲಿ ಮನೆ ಕಟ್ಟಿಕೊಂಡು

ವಾಸವಿದ್ದು, ಮನೆ ಕಟ್ಟಿರುವ ಬಗ್ಗೆ ಗ್ರಾಮ ಪಂಚಾಯತಿಯ ಯಾವುದೇ ದಾಖಲಾತಿಗಳು ಅಸ್ತಿತ್ವದಲ್ಲಿರುವುದಲ್ಲಿ ಎಂದು ದಾಖಲೆ ನೀಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರ:

ಪ್ರಶ್ನೆ 13. ಪ್ರಾಸಾ 3 ಮೋಹನ್ ಕುಮಾರ್, ಹಿರಿಯ ವೈಜ್ಞಾನಿಕ ಅಧಿಕಾರಿ, ಎಫ್.ಎಸ್.ಎಲ್, ಮಡಿವಾಳ, ಬೆಂಗಳೂರು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ: 24.08.2023 ರಂದು ಎ.ಎಸ್.ಐ ನಂಜುಂಡಗೌಡ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ ಇವರ ಮುಖಾಂತರ ಮೊಕದ್ದಮೆ ಸಂಖ್ಯೆ 124/2023 ರಲ್ಲಿ ಮೊಹರು ಮಾಡಿರುವ ವಸ್ತುಗಳನ್ನು ಸ್ವೀಕರಿಸಿರುವುದಾಗಿ, ದಿನಾಂಕ: 25.09.2023 ರಿಂದ 29.09.2023 ರವರೆಗೆ ಸದರಿ ವಸ್ತುವನ್ನು ಮಾದರಿ ಮುದ್ರೆಯೊಂದಿಗೆ ತಾಳೆ ಮಾಡಲಾಗಿ ಅದು ಯಥಾಸ್ಥಿತಿ ಯಲ್ಲಿ ಇತ್ತೆಂದು ಅಭಿಪ್ರಾಯ ಪಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರ:

ಪ್ರಶ್ನೆ 14. ಪ್ರಾಸಾ 3 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, **ವಿಶ್ಲೇಷಣೆಯ ವಿಧಾನ:** "Prl Civil Judge and JMFC Court, Chintamani" ಎಂಬ ಮುದ್ರೆಯೊಂದಿಗೆ ಮೊಹರು ಮಾಡಿದ ಬಟ್ಟೆ ಪ್ಯಾಕೆಟ್, ಮೊಹರುಗಳು ಹಾಗೆಯೇ ಇದ್ದು ಐ.ಓ. ಕಳುಹಿಸಿದ ಮಾದರಿಯ ಮುದ್ರೆಯೊಂದಿಗೆ ತಾಳೆ ಮಾಡಲಾಗಿದ್ದು, ಸದರಿ ವಸ್ತುಗಳ ವಿವರಣೆ ಮತ್ತು QR ಕೋಡ್ ಹೊಂದಿರುವ ಬಟ್ಟೆ ಪ್ಯಾಕೆಟ್ ಅದಕ್ಕೆ ಎರಡು ಕಾಗದದ ಚೀಟಿಗಳೊಂದಿಗೆ ಅಂಟಿಸಲಾಗಿದ್ದು, PSI-Chintamani Rural PS ಮತ್ತು Prl Civil Judge & JMFC, Chintamani ರವರು ದೃಢೀಕರಿಸಿದ್ದು, ಸದರಿ ವಸ್ತುವನ್ನು ತೆರೆದು ನೋಡಲಾಗಿ ವಿಶಿಷ್ಟವಾದ ವಾಸನೆಯನ್ನು ಹೊಂದಿದ್ದು, ಹಸಿರು-ಕಂದು ಬಣ್ಣದ ಎಲೆಗಳು ಹಾಗೂ ಹೂವು ಮತ್ತು ಕಾಯಿಗಳನ್ನು ಬಿಡುವ ತುದಿಭಾಗಗಳನ್ನು ಒಳಗೊಂಡಿರುವ, ಒಣಗಿದ ಮತ್ತು ಮುರಿದ ಕಾಂಡಗಳು ಕಂಡುಬಂದಿರುವುದಾಗಿ

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 15. ಪ್ರಾಸಾ 3 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಸದರಿ ವಸ್ತುವನ್ನು ತೆರೆಯುವ ಮೊದಲು ಪ್ಲಾಸ್ಟಿಕ್ ಕವರ್ ಸಮೇತ ತೂಕ ಮಾಡಲಾಗಿ ತೂಕವು 29.97 ಗ್ರಾಂ ಇತ್ತೆಂದು, ಹಾಗೂ ರಾಸಾಯನಿಕ ಪರೀಕ್ಷೆಗೆ ಒಳಪಡಿದ ನಂತರ ಸದರಿ ವಸ್ತುವಿನ ತೂಕವು 25.36 ಗ್ರಾಂ ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 16. ಪ್ರಾಸಾ 3 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ತಾನು ಕೆಳಗಿನ ಐದು ವಿವಿಧ ರೀತಿಯ ಪರೀಕ್ಷೆಯನ್ನು ನಡೆಸಿರುವುದಾಗಿ ಹಾಗೂ ಅದನ್ನು ತನ್ನ ವರದಿಯಲ್ಲಿ ನಮೂದಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

| | |
|---|---|
| 1. Microscopic characteristics: | The microscopic features found on the surface of the fruiting and flowering tops are the characteristic features of cannabis in Article No 1. |
| 2. Duquenois-Levine test: | Appearance of Violet colour in the chloroform layer positive for cannabis in Article No. 1 |
| 3. Para aminophenol test: | Formation of blue colour Positive for cannabis in Article No. 1 |
| 4. Thin Layer Chromatography: | Small quantity of the sample is extracted with chloroform and the extract is filtered, evaporated to suitable volume and spotted on the TLC plate and developed in two different solvent systems. |

| | |
|---|---|
| | System A: Petroleum ether & Diethyl ether (80:20)<br>System B: Toluene, (development in open chamber with plates sprayed with 10% silver nitrate and dried)<br>Result: Purple red colour spots with Fast blue B salt reagent<br>Positive for cannabinoids (constituent of ganja) in Article No. 1 |
| 5. UV Spectrophotometric analysis: | Small quantity of the sample is extracted with ethanol and extract is filtered after removing the colouring matter and used for UV Spectrophotometric analysis.<br>Result: Spectrum, at λmax=277.20 nm for Art. No.1.<br>Positive for tetrahydrocannabinol (major constituent of ganja) in Article No. 1. |

ಉತ್ತರಃ

ಪ್ರಶ್ನೆ 17. ಪ್ರಾಸಾ 3 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಳಿಗೆ ಒಳಪಡಿಸಿ ತನ್ನ ವರದಿ ಸಂಖ್ಯೆ FSL/FLMS/NS/793/2023 ರಲ್ಲಿ ನಮೂದಿಸಿರುವುದಾಗಿ ಸದರಿ ವಸ್ತು ಗಾಂಜಾಗೆ ಧನಾತ್ಮಕವಾಗಿ ಪ್ರತಿಕ್ರಿಯಿಸಿರುವುದಾಗಿ ಮತ್ತು ಗಾಂಜಾವು Psychoactive ಅಂಶಗಳು ಕಂಡುಬಂದಿರುತ್ತದೆಂದು, ರಾಸಾಯನಿಕ ವಿಶ್ಲೇಷಣೆಯ ನಂತರ ತಾನು ಕಛೇರಿಯ ಮೊಹರಿನೊಂದಿಗೆ ಪುನಃ ಪ್ಯಾಕ್ ಮಾಡಿ ಹಾಗೂ ಉಳಿದ ಮಾದರಿಯನ್ನು ಮಾದರಿ ಮುದ್ರೆಯೊಂದಿಗೆ ತನಿಖಾಧಿಕಾರಿಗಳಿಗೆ ಹಸ್ತಾಂತರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 18. ಪ್ರಾಸಾ 4 ನಾಗಭೂಷಣ್, ಎ.ಎಸ್.ಐ ಶಿಡ್ಲಘಟ್ಟ ಗ್ರಾಮಾಂತರ ಪೊಲೀಸ್ ಠಾಣೆ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ: 07.04.2023 ರಂದು ರಾತ್ರಿ 08:10 ಗಂಟೆ ಸಮಯದಲ್ಲಿ ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಪ್ರಾಸಾ-1 ಪಿ.ಎಸ್.ಐ ರವರು ಚಾ.ಸಾ-3 ರವರ ಮೂಲಕ ಕಳುಹಿಸಿದ ಒಂದು ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕ್ಕದ್ದಮ್ಮೆ ಸಂಖ್ಯೆ 124/2023 ರಂತೆ ಕಲಂ 8(b)(c), 20(a)(b) ಎನ್.ಡಿ.ಪಿ.ಎಸ್ ಕಾಯಿದೆಯಡಿ ಪ್ರಕರಣವನ್ನು ದಾಖಲು ಮಾಡಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ತಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತಾರೆ, ಮುಂದಿನ ತನಿಖೆಯನ್ನು ಚಾಸಾ-14 ಪಿ.ಎಸ್.ಐ ನಾರಾಯಣಸ್ವಾಮಿರವರಿಗೆ ವಹಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 19. ಪ್ರಾಸಾ 5 ಸಿ.ನಾರಾಯಣಸ್ವಾಮಿ, ನಿವೃತ್ತ ಪಿ.ಎಸ್.ಐ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 07.04.2023 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಪ್ರಾಸಾ-4 ರವರಿಂದ ಈ ಪ್ರಕರಣದ ಕಡತವನ್ನು ಪಡೆದು ಮುಂದಿನ ತನಿಖೆಯನ್ನು ಮುಂದುವರೆಸಿರುತ್ತಾರೆ, ಅದೇ ದಿನ ರಾತ್ರಿ 11.30 ಗಂಟೆ ಸಮಯದಲ್ಲಿ ಪ್ರಾಸಾ-1 ಪಿಎಸ್ಐ ರವರು ಠಾಣೆಗೆ ಹಾಜರಾಗಿ ಅಮಾನತ್ತು ಪಡಿಸಿಕೊಂಡಿದ್ದ ಮಾದಕ ವಸ್ತು ಗಾಂಜ, ಆರೋಪಿ ಮತ್ತು ದಾಖಲೆಗಳೊಂದಿಗೆ ಠಾಣೆಗೇ ಹಾಜರಾಗಿ ತನ್ನ ಮುಂದೆ ಹಾಜರುಪಡಿಸಿದ್ದನ್ನು ಸ್ವೀಕರಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 20. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಅಮಾನತ್ತು ಪಡಿಸಿಕೊಂಡಿದ್ದ ಮಾಲನ್ನು ಠಾಣಾ ಮಾಲು ಪಟ್ಟಿ ಸಂಃ 96/2023 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತಾರೆ, ಆರೋಪಿಯನ್ನು ವಿಚಾರಣೆ ಮಾಡಿ, ಆತನನ್ನು ಆವೇಳೆಯಾದ್ದ

ಕಾರಣ ಠಾಣಾ ಸುರಕ್ಷಿತ ಬಂಧನದಲ್ಲಿಟ್ಟಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ

ಪ್ರಶ್ನೆ 21. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಮರುದಿನ ತನಿಖೆಯನ್ನು ಮುಂದುವರೆಸಿ ಆರೋಪಿಯ ಸ್ವಇಚ್ಚಾ ಹೇಳಿಕೆಯನ್ನು ದಾಖಲಿಸಿರುತ್ತಾರೆ, ನಂತರ ಆರೋಪಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಿ, ರಿಮ್ಯಾಂಡ್ ಅರ್ಜಿಯಾಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ, ಅದೇ ದಿನ ಪಂಚ ಸಾಕ್ಷಿದಾರರಾದ ಚಾಸಾ-5 ಮತ್ತು ಚಾಸಾ-6 ರವರ ಹೇಳಿಕೆ, ಸಿಬ್ಬಂದಿಯಾದ ಚಾಸಾ-3 ಮತ್ತು ಚಾಸಾ-4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ

ಪ್ರಶ್ನೆ 22. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಿಃ 10.04.2023 ರಂದು ಗಾಂಜ ಬೆಳೆದ ವಾಸದ ಮನೆಯ ದೃಢಿಕರಣ ಪತ್ರವನ್ನು ಪಿಡಿಓರವರಿಗೆ ಮನವಿ ಸಲ್ಲಿಸಿ, ದಾಖಲೆಯನ್ನು ಸ್ವೀಕರಿಸಿರುತ್ತರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ

ಪ್ರಶ್ನೆ 23. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಿಃ 05.06.2023 ರಂದು ಅಮಾನತ್ತು ಪಡಿಸಿಕೊಂಡ ಗಾಂಜ ಗಿಡದ correctness certificate ನ್ನು ಮಾಡಿಸಲು ಜಿಲ್ಲಾ ವಿಶೇಷ ನ್ಯಾಯಲಯಾದ ಮುಂದೆ ಆರ್ಜಿ ಸಲ್ಲಿಸಿದ್ದು, ದಿಃ 07.06.2023 ರಂದು ಅನುಮತಿಯನ್ನು ಪಡೆದುಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ

ಪ್ರಶ್ನೆ 24. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಿಃ 23.08.2023 ರಂದು ಅಮಾನತ್ತು ಪಡಿಸಿಕೊಂಡಿದ್ದ ಮಾಲನ್ನು ಚಿಂತಾಮಣಿ ಪ್ರಾಧಾನ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ correctness certificate ನ್ನು ಪಡೆದುಕೊಂಡಿರುತ್ತಾರೆ, ಸದರಿ ಕಾಲಕ್ಕೆ ಎಫ್.ಎಸ್.ಎಲ್. ಗಾಗಿ 30 ಗ್ರಾಂ, ವಿಚಾರಣೆಗಾಗಿ 20 ಗ್ರಾಂ ಗಾಂಜವನ್ನು ಪ್ರತ್ಯೇಕಿಸಿ ಪ್ಯಾಕ್ ಮಾಡಿ ಸೀಲ್ ಮಾಡಲಾಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 25. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಉಳಿದ 185 ಗ್ರಾಂ ಗಾಂಜವನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಲಾಗಿರುತ್ತದೆ, ಸದರಿ ಕಾಲಕ್ಕೆ ಪೊಟೋಗಳನ್ನು ತೆಗೆಸಲಾಗಿದ್ದು, ಸದರಿ ಪೊಟೊಗಳನ್ನು ಠಾಣೆಗೆ ನೀಡಿದ್ದ ಕ್ಯಾಮರಾದಲ್ಲಿ ತಮ್ಮ ಸಿಬ್ಬಂದಿ ಮೂಲಕ ತೆಗೆಸಿದ್ದು, ಸದರಿ ಪೊಟೋಗಳನ್ನು ಸಿಡಿಗೆ ವರ್ಗಾಯಿಸಿ ತಾನು ಮತ್ತು ತಮ್ಮ ಸಿಬ್ಬಂದಿ ಕಲಂ 65(ಬಿ) ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 26. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಮಾದರಿ ಮತ್ತು ವಿಚಾರಣೆಗಾಗಿ ಪ್ರತ್ಯೇಕವಾಗಿ ತೆಗೆದ ಗಾಂಜ ಪ್ಯಾಕೇಟ್ ಗಳನ್ನು ಠಾಣಾ ಮಾಲು ಪಟ್ಟಿ ಸಂಃ 274/2023 ರಂತೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 27. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಿಃ 24.08.2023 ರಂದು ಸದರಿ 30 ಗ್ರಾಂ ಗಾಂಜ ಪ್ಯಾಕೇಟ್ ನ್ನು

ಚಾಸಾ-12 ರವರಿಗೆ ಪಾಸ್ ಪೋರ್ಟ್ ನೀಡಿ ಎಫ್.ಎಸ್.ಎಲ್. ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದು, ಸದರಿಯವರು ಅವುಗಳನ್ನು ತಲುಪಿಸಿ ಸ್ವೀಕೃತಿಯನ್ನು ಸ್ವೀಕರಿಸಿ ತಂದು ಹಾಜರುಪಡಿಸಿದ್ದನ್ನು ತಾನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆಂದು ಹಾಗೂ ದಿಃ 10.10.2023 ರಂದು ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 28. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಿಃ 27.11.2023 ರಂದು ಉಳಿದ 185 ಗ್ರಾಂ ಗಾಂಜವನ್ನು ನಾಶಪಡಿಸಲು ನ್ಯಾಯಾಲಯದ ಆದೇಶ ಪಡೆದು, ಡಿ.ಎ.ಆರ್. ಉಗ್ರಾಣಕ್ಕೆ ಹಾಜರುಪಡಿಸಿ ಹಿಂಬರಹವನ್ನು ಪಡೆದುಕೊಂಡಿರುತ್ತಾರೆಂದು ಹಾಗೂ ಆರೋಪಿಯ ವಿರುದ್ಧ ತನಿಖೆ ಪೂರ್ಣಗೊಳಿಸಿ, ಆತನ ವಿರುದ್ಧ ಸಾಕ್ಷ್ಯ ಆಧಾರಗಳು ಕಂಡು ಬಂದಿರುವುದರಿಂದ ದೋಷರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 29. ಈ ಪ್ರಕರಣದಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ ?

ಉತ್ತರಃ

ಪ್ರಶ್ನೆ 30. ಈ ಪ್ರಕರಣದಲ್ಲಿ ನಿಮ್ಮ ಪರ ಯಾವುದಾದರೂ ಲಿಖಿತ ಹೇಳಿಕೆಗಳನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರಿಪಡಿಸುವಿರಾ ?

ಉತ್ತರಃ

ಪ್ರಶ್ನೆ 31. ಈ ಪ್ರಕರಣದಲ್ಲಿ ನೀವು ಮತ್ತೆ ಏನಾದರೂ ಹೇಳುವುದಿದೆಯಾ ?

ಉತ್ತರ: ಇಲ್ಲ.

ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ 1 ರಿಂದ 31 ಪ್ರಶ್ನೆಗಳಿಗೆ ಆರೋಪಿತ ತನ್ನ ಸ್ವಇಚ್ಛೆಯಿಂದ ಕೊಟ್ಟ ಹೇಳಿಕೆಗಳನ್ನು ಸರಿಯಾಗಿ ದಾಖಲಿಸಿಕೊಂಡಿರುವೆ ಎಂದು ನಾನು ಈ ಮೂಲಕ ದೃಢಿಕರಿಸುತ್ತೇನೆ.

ದಿನಾಂಕ: 07.08.2026
ಸ್ಥಳ: ಚಿಕ್ಕಬಳ್ಳಾಪುರ

**(ಟಿ.ಪಿ. ರಾಮಲಿಂಗೇ ಗೌಡ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಬಳ್ಳಾಪುರ.

Narasimhappa